(ಸಾಕ್ಷಿಯನ್ನು ದಿಃ 10-3-2021 ರಂದು ಕರೆಸಿ ಪ್ರಮಾಣ ವಚನ ಬೋಧಿಸಿ ಪಾಟಿ ಸವಾಲಿಗೆ ಒಳಪಡಿಸಲಾಯಿತು. )

**ಮುಂದುವರೆದ ಪಾಟಿ ಸವಾಲುಃ ಶ್ರೀ ಎಸ್ ಕೆ ಪಿ ವಕೀಲರಿಂದಃ ವಾದಿ ಪರವಾಗಿಃ**

ನನ್ನ ಸ್ವಾಧೀನದಲ್ಲಿ ಒಂದು ಎಕರೆ 11 ಗುಂಟೆ ಜಮೀನು ಇರುತ್ತದೆ. ಅದರಲ್ಲಿ ನನ್ನ ಹೆಸರಿಗೆ 15 ಗುಂಟೆ 4 ಆಣೆ ಜಮೀನು ಇರುತ್ತದೆ. 1 ನೇ ಪ್ರತಿವಾದಿಯ ಹೆಸರಿನಲ್ಲಿ 15 ಗುಂಟೆ 4 ಆಣೆ ಜಮೀನು ಇರುತ್ತದೆ. 1 ನೇ ಪ್ರತಿವಾದಿಯ ಹೆಸರಿನಲ್ಲಿರುವ 15 ಗುಂಟೆ 4 ಆಣೆ ಜಮೀನಿನಲ್ಲಿ 2 ರಿಂದ 4 ರವರಿಗೂ ಸಹ ಹಕ್ಕು ಇರುತ್ತದೆ. 5 ರಿಂದ 10 ನೇ ಪ್ರತಿವಾದಿಗಳ ಹೆಸರಿಗೆ ಎಷ್ಟು ಜಮೀನು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ರೆವಿನ್ಯೂ ದಾಖಲಾತಿಗಳ ಪ್ರಕಾರ 5 ರಿಂದ 7 ನೇ ಪ್ರತಿವಾದಿಗಳ ಹೆಸರಿಗೆ 3 ಗುಂಟೆ ಇರುತ್ತದೆ ಎಂದರೆ ನಿಜ. ಅದೇ ರೀತಿ ರೆವಿನ್ಯೂ ದಾಖಲಾತಿಗಳ ಪ್ರಕಾರ 8 ರಿಂದ 10 ನೇ ಪ್ರತಿವಾದಿಗಳ ಹೆಸರಿಗೆ ತಲಾ 3 ಗುಂಟೆ 1 ಆಣೆ ಜಮೀನು ಇರುತ್ತದೆ ಎಂದರೆ ನಿಜ. ಅದೇ ರೀತಿ ರೆವಿನ್ಯೂ ದಾಖಲಾತಿಗಳ ಪ್ರಕಾರ 11 ನೇ ಪ್ರತಿವಾದಿಯ ಹೆಸರಿಗೆ 5 ಗುಂಟೆ 4 ಆಣೆ ಜಮೀನು ಇರುತ್ತದೆ ಎಂದರೆ ನಿಜ. 9 ಗುಂಟೆ 8 ಆಣೆ ಜಮೀನು ನಗರಸಭೆ ರಸ್ತೆಗೆ ಹೋಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ನಾನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಡಬ್ಲ್ಯೂ.ಪಿ ನಂ. 10633/2005 ರಂತೆ ಸಿಎಮ್‌ಸಿ ವಿರುದ್ಧ ಒಂದು ಕೇಸನ್ನು ಹಾಕಿದ್ದೆ ಎಂದರೆ ಇರಬಹುದು, ನನಗೆ ಗೊತ್ತಿಲ್ಲ. ನಾನು ಕರ್ನಾಟಕ ಉಚ್ಚ ನ್ಯಾಯಾಲಯ ಧಾರವಾಡದಲ್ಲಿ ಡಬ್ಲ್ಯೂ.ಪಿ.ನಂ. 60682/2009 ರಂತೆ ಸಿಎಮ್‌ಸಿ ವಿರುದ್ಧ ಒಂದು ಕೇಸನ್ನು ಹಾಕಿದ್ದೆ ಎಂದರೆ ನಿಜ. ರಸ್ತೆಗೆ ಹೊದಂತಹ 9 ಗುಂಟೆ 8 ಆಣೆಯನ್ನು ಕಳೆದು ಈಗ ನನ್ನ ಹತ್ತಿರ ಕೇವಲ 41 ಗುಂಟೆ 8 ಆಣೆ ಉಳಿದಿದೆ ಎಂದರೆ ಸರಿಯಲ್ಲ. 41 ಗುಂಟೆ 8 ಆಣೆ ಜಮೀನಿನ ಪೈಕಿ 3 ಗುಂಟೆ ಜಮೀನು ಗೋವೇಕರ ರವರ ಕಂಪೌಂಡ್ ಹತ್ತಿರ ಇದೆ ಎಂದರೆ ನಿಜ. ದಾವಾ ಸ್ವತ್ತಿನ ಒಟ್ಟೂ ವಿಸ್ತೀರ್ಣ 39 ಗುಂಟೆ ಇರುತ್ತದೆ ಎಂದರೆ ಇರಬಹುದು. ಸದರಿ 39 ಗುಂಟೆ ಜಮೀನಿನಲ್ಲಿ ನನಗೆ ಹಕ್ಕು ಇದ್ದು ಬೇರೆ ಸ್ವತ್ತಿನ ಮೇಲೆ ನನಗೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ 39 ಗುಂಟೆ ಜಮೀನಿನಲ್ಲಿ ಇಲ್ಲಿಯ ತನಕ ವಾದಿ ಮತ್ತು ಪ್ರತಿವಾದಿಗಳ ನಡುವೆ ಯಾವುದೇ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳ ನಡುವೆ ತೊಂಡಿ ವಾಂಟಣಿ ಆಗಿದೆ ಎಂದರೆ ಸಾಕ್ಷಿಯು ಬೇರೆ ಬೇರೆ ಜಾಗಗಳಲ್ಲಿ ಮನೆ ಕಟ್ಟಲಾಗಿದೆ ಎಂದು ನುಡಿದಿರುತ್ತಾರೆ. ರೆವಿನ್ಯೂ

ದಾಖಲಾತಿಗಳಲ್ಲಿ ಹಿಸ್ಸೆ ಆಗಿಲ್ಲ ಎಂದರೆ ನಿಜ. ವಾದಿ ಮತ್ತು ಪ್ರತಿವಾದಿಗಳು ತಮ್ಮ ತಮ್ಮ ವಹಿವಾಟಿನ ಪ್ರಕಾರ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ನಿಜ.

ದಾವಾ ಸ್ವತ್ತನ್ನು ಹಿಸ್ಸೆ ಮಾಡಬೇಕೆಂದು ವಾದಿಯು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ ಮುಂದೆ ಒಂದು ರಿಟ್ ಪಿಟಿಶನ್ ಹಾಕಿದ್ದರು ಎಂದರೆ ಅದು ನನಗೆ ಗೊತ್ತಿಲ್ಲ. ಅದೇ ರೀತಿ ವಾದಿಯು ನ್ಯಾಯಾಂಗ ನಿಂದನೆ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಅದು ನನಗೆ ಗೊತ್ತಿಲ್ಲ. ನಿಡಿ-5ರ ದಾಖಲಾತಿ ಪ್ರಕಾರ ಮೋಜಣಿ ಮಾಡಲಾಗಿದೆ ಎಂದರೆ ಇರಬಹುದು. ಮೋಜಣಿ ಪ್ರಕಾರ ಹಿಸ್ಸೆ ಮಾಡುವಾಗ ನಾವು ತಕರಾರು ಹಾಕಿದ್ದೇವು ಎಂದರೆ ನನಗೆ ನೆನಪಿಲ್ಲ. ಸದರಿ ವಿಚಾರವನ್ನು ನಾವು ಮಾನ್ಯ ಉಚ್ಛ ನ್ಯಾಯಾಲಯಕ್ಕೆ ತಿಳಿಸಿದ್ದೇವು ಎಂದರೆ ನನಗೆ ನೆನಪಿಲ್ಲ. ನಾವು ತಕರಾರು ಹಾಕಿದ್ದ ಕಾರಣ ದಾವಾ ಸ್ವತ್ತಿನಲ್ಲಿ ಇಲ್ಲಿಯ ತನಕ ಹಿಸ್ಸೆ ಆಗಲಿಲ್ಲ ಎಂದರೆ ಸರಿಯಲ್ಲ. ನಿಡಿ-5ರ ಪ್ರಕಾರ ಇಲ್ಲಿಯ ತನಕ ರೆವಿನ್ಯೂ ನ್ಯಾಯಾಲಯದಲ್ಲಿ ಅಂತಿಮ ತೀರ್ಪು ಹೊರಬಂದಿಲ್ಲ.

ನ್ಯಾಯಾಲಯದ ಆಯುಕ್ತರನ್ನು ನೇಮಕ ಮಾಡಿ ದಾವಾ ಸ್ವತ್ತನ್ನು ಅಳತೆ ಮಾಡಿದರೆ ನನ್ನ ತಕರಾರು ಇರುವುದಿಲ್ಲ. ಓ ಎಸ್ ನಂ. 35/1972ರಲ್ಲಿ ನಾನು ಪಕ್ಷಗಾರನಾಗಿರಲಿಲ್ಲ ಎಂದರೆ ನನಗೆ ನೆನಪಿಲ್ಲ. ಆರ್ ಎ ನಂ. 57/1985ರಲ್ಲಿ ನಾನು ಪಕ್ಷಗಾರನಾಗಿರಲಿಲ್ಲ ಎಂದರೆ ಸರಿಯಲ್ಲ. ಈ ದಾವೆಯ ತಂಟೆ ತಕರಾರುಗಳನ್ನು ಈಗಾಗಲೇ ಸಂಪೂರ್ಣವಾಗಿ ಇತ್ಯರ್ಥ ಗೊಳಿಸಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಸೇರಿದ 6 ಗುಂಟೆ ಜಮೀನನ್ನು ಭೂ ಪರಿವರ್ತನೆ ಮಾಡಿಸಿಕೊಂಡಿದ್ದೇನೆ ಎಂದರೆ ನಿಜ. ವಾದಿಯ ಜಮೀನನ್ನು ಸಹ ಸೇರಿಸಿ ನಾನು ಹಿಸ್ಸೆ ಮಾಡಿಸಿಕೊಂಡಿದ್ದೆ ಎಂದರೆ ಸರಿಯಲ್ಲ. ನಾನು ಭೂ ಪರಿವರ್ತನೆ ಮಾಡಿಸಿಕೊಂಡ ಜಮೀನನ್ನು ನ್ಯಾಯಾಲಯದ ಆಯುಕ್ತರನ್ನು ನೇಮಕ ಮಾಡಿ ಅಳತೆ ಮಾಡಿಸಿದರೆ ನನ್ನ ತಕರಾರು ಇರುವುದಿಲ್ಲ. ನಾನು ಸರ್ವೆ ಇಲಾಖೆಯಲ್ಲಿ ನೌಕರಿಯಲ್ಲಿದ್ದ ಕಾರಣ ವಾದಿಗೆ ಸೇರಿದ ಜಮೀನನ್ನು ಕಬಳಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ನ್ಯಾಯಯುತವಾಗಿ ಸೇರಿದ ಜಮೀನನ್ನು ಅಳತೆ ಮಾಡಿಕೊಟ್ಟರೆ ನನ್ನ ತಕರಾರು ಇರುವುದಿಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸರಿ ಇದೆ**

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಕಾರವಾರ.